# ಹಾರುತ ದೂರ ದೂರ

ಅಂತರಿಕ್ಷದ ಬಗೆಗಿನ ಮನುಷ್ಯನ ಕುತೂಹಲದ ಕಣ್ಣಿಗೆ ಕಾಲೂ ಸೇರಿಕೊಂಡು ದಶಕಗಳಾದವು. ಆದರೂ ಈವರೆಗೆ ಅಂತರಿಕ್ಷಯಾನ ಎನ್ನುವುದು ಸರ್ಕಾರಿ ಸಂಸ್ಥೆಗಳ ವೈಜ್ಞಾನಿಕ ಸಾಹಸಯಾತ್ರೆಗಳಾಗಿ ಗುರ್ತಿಸಿಕೊಂಡಿದ್ದವು. ಆದರೆ, ಈಗ ಖಾಸಗಿ ಸಂಸ್ಥೆಗಳು ಕೂಡ ಅಂತರಿಕ್ಷವನ್ನು ಕೈಗೆಟುಕಿಸಿಕೊಂಡಿವೆ. ರಿಚರ್ಡ್ ಬ್ರಾನ್ಸನ್‌ರ ‘ವರ್ಜಿನ್ ಅಟ್ಲಾಂಟಿಕ್’ ಹಾಗೂ ಜೆಫ್ ಬೇಜ಼ೋಸ್‌ರ ‘ಬ್ಲೂ ಆರಿಜಿನ್’ ಸಂಸ್ಥೆ ಸಿದ್ಧಪಡಿಸಿರುವ ರಾಕೆಟ್ ವಾಹನಗಳು ಅಂತರಿಕ್ಷಯಾನ ನಡೆಸುವುದರೊಂದಿಗೆ ‘ಅಂತರಿಕ್ಷ ಪ್ರವಾಸೋದ್ಯಮ’ ಯುಗಕ್ಕೆ ಅಧಿಕೃತ ಚಾಲನೆ ದೊರೆತಿದೆ. ಈ ಎರಡೂ ಯಾನಗಳಲ್ಲಿ ಬೆರಳೆಣಿಕೆ ಮಂದಿಯಷ್ಟೇ ಭಾಗಿಯಾಗಿದ್ದರೂ, ಮುಂದಿನ ದಿನಗಳಲ್ಲಿ ಬಾಹ್ಯಾಕಾಶಕ್ಕೆ ಹೋಗಿಬರುವವರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಲಿದೆ. ಸದ್ಯಕ್ಕೆ ಜನಸಾಮಾನ್ಯರ ಪಾಲಿಗೆ ಅಂತರಿಕ್ಷ ಪ್ರವಾಸ ಗಗನಕುಸುಮ. ಆದರೆ, ಆ ಪ್ರವಾಸ ಹೇಗಿರಬಹುದೆನ್ನುವ ವಿಶ್ಲೇಷಣೆಯನ್ನು ‘ಸುಧಾ’ ಓದುಗರ ಕೈಗೆಟುಕಿಸುತ್ತಿದೆ.

■ ಡಾ. ಬಿ.ಆರ್. ಗುರುಪ್ರಸಾದ್

